# ಕಂಗನಾ ಗೂಗ್ಲಿಗೆ ಟ್ವಿಂಕಲ್ ರನೌಟ್



ಕಂಗನಾ ರನೌತ್ ಮೊನ್ನೆ ಮೊನ್ನೆ ಮತ್ತೆ ಸಾಮಾಜಿಕ ಮಾಧ್ಯಮದಲ್ಲಿ ಗುರ್ ಎಂದರು. ಅವರ ಗುರಿ ಈ ಸಲ ಟ್ವಿಂಕಲ್ ಖನ್ನಾ. ಒಂದು ಕಾಲದಲ್ಲಿ ನಾಯಕಿಯಾಗಿದ್ದ ಟ್ವಿಂಕಲ್ ಸಂದರ್ಶನವೊಂದರಲ್ಲಿ ಮಾತನಾಡಿದ ಹಳೆಯ ವಿಡಿಯೊ ತುಣುಕನ್ನು ಈಗ ನೋಡಿ ಕಂಗನಾ ಪ್ರತಿಕ್ರಿಯಿಸಿದ್ದು.

ಸ್ತ್ರೀವಾದದ ನೆಲೆಗಟ್ಟಿನಲ್ಲಿ ಟ್ವಿಂಕಲ್ ಅಭಿಪ್ರಾಯ ಪೊಳ್ಳು ಎಂದು 'ಮಣಿಕರ್ಣಿಕಾ' ನಟಿ ಖಾರವಾಗಿ ಹೇಳಿದರು. ಇದನ್ನು ಓದಿದ ಕೆಲವು ಸಿನಿಮಾ ಪ್ರೇಮಿಗಳು, 'ಟ್ವಿಂಕಲ್ ಅವರನ್ನು ಕಂಗನಾ ರನೌಟ್ ಮಾಡಿದರು' ಎಂದೆಲ್ಲ ಪನ್ ಮಾಡಿದರು.

ಟ್ವಿಂಕಲ್ ಖನ್ನಾ ಪುರುಷರನ್ನು ಪಾಲಿಥಿನ್ ಬ್ಯಾಗ್‌ಗೆ ಹೋಲಿಸಿದ್ದು ಕಂಗನಾ ಅವರಿಗೆ ಕೋಪ ತರಿಸಿದೆ. ಸ್ತ್ರೀವಾದದ ಅರಿವು ತಮ್ಮಲ್ಲಿ ಮೂಡಿದ್ದು ಯಾವಾಗ ಎಂದು ಎದುರಾದ ಪ್ರಶ್ನೆಗೆ ಉತ್ತರಿಸುತ್ತಾ ಟ್ವಿಂಕಲ್ ಹೀಗೆ ಹೇಳಿದ್ದರು: 'ನನ್ನ ಅಮ್ಮ ಡಿಂಪಲ್ ಕಪಾಡಿಯಾ ಆಗೀಗ ಮಾತನಾಡುವಾಗ ಪುರುಷರು ಬದುಕಿಗೆ ಅನಿವಾರ್ಯ ಅಲ್ಲ ಎಂದು ಹೇಳುತ್ತಿದ್ದರು. ಅವರು ಪುರುಷರನ್ನು ಕೈಚೀಲದಂತೆ ಎಂದು ಹೇಳಿದ್ದು ನನ್ನ ಮನಸ್ಸನ್ನು ಹೊಕ್ಕಿತ್ತು. ನನ್ನ ಪ್ರಕಾರ ಅವರು ಪಾಲಿಥಿನ್ ಚೀಲವಷ್ಟೆ. ಹೆಣ್ಣುಮಕ್ಕಳು ಗಂಡಸರಿಗಿಂತ ಎಲ್ಲ ವಿಷಯಗಳಲ್ಲೂ ಬಲಾಢ್ಯರು. ಗಂಡಸರಿಗೆ ಬೇಗ ಕೂದಲು ಉದುರುತ್ತದೆ. ಅದನ್ನು ಮರೆಮಾಚಲು ತರಹೇವಾರಿ ಟೋಪಿ, ಪೇಟ ಹಾಕಲಾರಂಭಿಸುತ್ತಾರೆ. ಸರಾಸರಿ ಗಂಡಸರು ಹೆಂಗಸರಿಗಿಂತ ಹತ್ತು ಹದಿನೈದು ವರ್ಷ ಮೊದಲೇ ಸಾಯುತ್ತಾರೆ. ಅವರ ಬಗೆಗೆ ಅಯ್ಯೋ ಎನಿಸುತ್ತದೆ.'



ನಟ ಅಕ್ಷಯ್‌ಕುಮಾರ್ ಅವರನ್ನು ಮದುವೆಯಾಗಿರುವ ಟ್ವಿಂಕಲ್ ಇಬ್ಬರು ಮಕ್ಕಳ ತಾಯಿ. 1995ರಿಂದ ಆರು ವರ್ಷ ಅವರು ಸಿನಿಮಾ ನಾಯಕಿಯಾಗಿ ಬಣ್ಣಹಚ್ಚಿದ್ದರು.

ಕಂಗನಾ ಅವರು ಟ್ವಿಂಕಲ್ ವಿಡಿಯೊ ತುಣುಕನ್ನು ಕಂಡು ಸ್ವಜನಪಕ್ಷಪಾತದ ವಿಷಯವನ್ನು ಮುಂದುಮಾಡಿದರು. ಟ್ವಿಂಕಲ್ ಮೇಲೆ ಟೀಕಾಬಾಣ ಪ್ರಯೋಗಿಸಿದರು. 'ಬೆಳ್ಳಿ ಚಮಚವನ್ನು ಬಾಯಲ್ಲಿ ಇಟ್ಟುಕೊಂಡು ಹುಟ್ಟುವ ಇಂಥವರಿಗೆ ಚಿನ್ನದ ತಟ್ಟೆಯಲ್ಲಿಟ್ಟು ಸಿನಿಮಾ ಅವಕಾಶವನ್ನು ಕೊಟ್ಟಿದ್ದರು. ಅಭಿನಯದಲ್ಲಿ ಸಾಧಿಸಿದ್ದು ಅಷ್ಟರಲ್ಲೇ ಇದೆ. ಈಗ ಸ್ತ್ರೀವಾದದ ವಿಷಯದಲ್ಲಿ ಇಷ್ಟು ಹಗುರವಾಗಿ ಮಾತನಾಡಿ, ಅದಕ್ಕೆ ಇರುವ ಘನತೆಯನ್ನೂ ಕಳೆಯುತ್ತಾರೆ' ಎಂಬರ್ಥದಲ್ಲಿ ಕಂಗನಾ ಪ್ರತಿಕ್ರಿಯಿಸಿದರು.

ಪದೇ ಪದೇ ವಿವಾದಾತ್ಮಕ ಹೇಳಿಕೆಗಳನ್ನು ನೀಡುವ ಕಂಗನಾ, ಇತ್ತೀಚೆಗೆ ಆ ವರಸೆಗೆ ವಿರಾಮ ಹಾಕುತ್ತಿರುತ್ತಾರೆ. ಅವರು ಮೊದಲಿನ ಫಾರ್ಮ್‌ನಲ್ಲಿ ಇದ್ದಿದ್ದರೆ ಟ್ವಿಂಕಲ್ ಆಡಿದ ಮಾತಿಗೆ ಕಳೆದ ಡಿಸೆಂಬರ್‌ನಲ್ಲೇ ಪ್ರತಿಕ್ರಿಯೆ ಬರಬೇಕಿತ್ತು. ■



# ವಿದ್ಯಾ ಹೆಸರಲ್ಲಿ ಇನ್ಯಾರದ್ದೋ ಕೊಸರು

ತಮ್ಮ ಹೆಸರಿನಲ್ಲಿ ಸಾಮಾಜಿಕ ಮಾಧ್ಯಮದಲ್ಲಿ ನಕಲಿ ಅಕೌಂಟ್‌ಗಳನ್ನು ಸೃಷ್ಟಿಸಿ, ದೈನೇಸಿಗಳಂತೆ ಹಣ ಕೇಳಿ, ಕ್ರಮೇಣ ವಂಚಿಸುವ ಮನಸ್ಸುಗಳನ್ನು ನಾವು–ನೀವು ನೋಡಿರಲಿಕ್ಕೆ ಸಾಕು. ಪಾಪ, ನಟಿ ವಿದ್ಯಾ ಬಾಲನ್ ಅವರು ಇಂತಹ ಸಮಸ್ಯೆಯಿಂದಾಗಿ ಮುಂಬೈನ ಪೊಲೀಸ್ ಠಾಣೆಗೆ ಎಡತಾಕಿದ್ದಾರೆ.

ಇ–ಮೇಲ್, ಇನ್‌ಸ್ಟಾಗ್ರಾಂ ಪ್ರೊಫೈಲ್ ಅಷ್ಟೇ ಅಲ್ಲದೆ, ವಾಟ್ಸ್‌ಆ್ಯಪ್ ಮೂಲಕವೂ ವಿದ್ಯಾ ಹೆಸರಿನಲ್ಲಿ ಯಾರು ಯಾರೋ ಹಣ ಪೀಕುತ್ತಿರುವುದು ಅವರ ಗಮನಕ್ಕೆ ಬಂದಿದೆ.

ಇದೇ ವರ್ಷ ಜನವರಿಯಲ್ಲಿ ಡಿಸೈನರ್ ಒಬ್ಬರು ಫೋನ್‌ಮಾಡಿ, ವಿದ್ಯಾ ಬಾಲನ್ ಅವರನ್ನು ಸಂಪರ್ಕಿಸಿದರು. 'ಯಾರೋ ನಿಮ್ಮ ಹೆಸರು ಹೇಳಿಕೊಂಡು ನನಗೆ ಮೊಬೈಲ್ ಸಂದೇಶಗಳನ್ನು ಕಳುಹಿಸಿದ್ದರು. ಒಟ್ಟಾಗಿ ಕೆಲಸ ಮಾಡೋಣ ಎಂದೆಲ್ಲ ಅವರು ಆಹ್ವಾನ ಕೊಟ್ಟರು. ನೀವು ಹಾಗೆ ಸಂದೇಶ ಕಳುಹಿಸುತ್ತಿರಲಿಲ್ಲ. ಹೀಗಾಗಿ ಯಾವುದಕ್ಕೂ ಕೇಳೋಣ ಎಂದು ನಿಮಗೆ ಕರೆ ಮಾಡಿದೆ' ಎಂದರು. ಅವರ ಈ ಮಾತನ್ನು ಕೇಳಿದ್ದೇ ವಿದ್ಯಾ ಎಚ್ಚೆತ್ತುಕೊಂಡರು. ಚಿತ್ರರಂಗದಲ್ಲಿ ಅವಕಾಶ ಕೊಡಿಸುವುದಾಗಿ ಯಾರು ಯಾರೋ ಅಮಾಯಕರಿಂದ ಹಣ ಕೀಳಲು ತಮ್ಮ ಹೆಸರನ್ನು ಬಳಸಿಕೊಳ್ಳುತ್ತಿರುವುದು ಅವರ ಅರಿವಿಗೆ ಬಂದಿತು.

ಮುಂಬೈನ ಖಾರ್ ಪೊಲೀಸ್ ಠಾಣೆಗೆ ವಿದ್ಯಾ ದೂರು ನೀಡಿದ್ದು, ಪೊಲೀಸರು ವಿಚಾರಣೆ ನಡೆಸುತ್ತಿದ್ದಾರೆ. ಮನರಂಜನಾ ಮಾಧ್ಯಮದಲ್ಲಿ ಈ ರೀತಿ ಹಣ ಪೀಕುವವರು ಹೆಚ್ಚಾಗುತ್ತಿದ್ದಾರೆ ಎಂದೂ ವಿದ್ಯಾ ಹೇಳಿದ್ದಾರೆ. ■